ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗರವರು ಅನಧಿಕೃತವಾಗಿ ಅರಣ್ಯ ಪ್ರದೇಶಗಳಲ್ಲಿ ನಿರಾಕ್ಷೇಪಣ ಪತ್ರ ನೀಡಿದ 9 ಅಧಿಕಾರಿಗಳ ವಿರುದ್ಧ ದೋಷಾರೋಪ ತಯಾರಿಸಿ ಮುಂದಿನ ಕ್ರಮಕ್ಕಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ವೃತ್ತರವರಿಗೆ ಸಲ್ಲಿಸಿರುತ್ತಾರೆ. ಮುಂದುವರೆದು, ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ಆರೋಪದಡಿ ವಲಯ ಅರಣ್ಯಾಧಿಕಾರಿ, ಕನಕಪುರ ವಲಯ ಹಾಗು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕನಕಪುರ ಉಪ ವಿಭಾಗರವರನ್ನು ಫೆಬ್ರವರಿ–2012 ರಿಂದ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ಅರಣ್ಯ ಪ್ರದೇಶಗಳಲ್ಲಿ ಮಂಜೂರಾದ ಕಲ್ಲು ಗುತ್ತಿಗೆ ವಿವರಗಳನ್ನು ಸಲ್ಲಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಕೋರಿದ್ದು ಮಾಹಿತಿ ಬಂದ ನಂತರ ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿರುವುದಾಗಿ ಕಂಡು ಬಂದ ಎಲ್ಲಾ ಅಧಿಕಾರಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

ಋ) ಅಕ್ರಮ ಕಲ್ಲು ಗಣಿಗಾರಿಕೆ ತಡೆಯಲು ಮುಂಜಾಗ್ರತ ಕ್ರಮ:

ಅಕ್ರಮ ಗಣಿಗಾರಿಕೆ ತಡೆಯಲು ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಗಸ್ತು ಏರ್ಪಡಿಸಲಾಗಿದೆ. ಈ ಕುರಿತು ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ನುರಿತ ಸಿಬ್ಬಂದಿ ನಿಯೋಜನೆ/ವರ್ಗಾವಣೆ ಮುಖಾಂತರ ನೇಮಿಸಲಾಗಿದೆ.

ಜಲ ಸಂವರ್ಧನಾ ಯೋಜನೆ ವಿಶ್ವಬ್ಯಾಂಕನಿಂದ ಬಿಡುಗಡೆಯಾಗಿರುವ ಹಣ

309 : (292)

ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)

ಪ್ರಶ್ನೆ

ಅ) ಜಲ ಸಂವರ್ಧನಾ ಯೋಜನೆಗೆ ವಿಶ್ವಬ್ಯಾಂಕ್ ಮುಖಾಂತರ ಪ್ರಥಮ ಹಂತದಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು; ಇದರ ಪೈಕಿ ಕೋಲಾರ, ಚಿಕ್ಕಬಳ್ಳಾಪುರ ಇತರೆ ಜಿಲ್ಲೆಗಳಲ್ಲಿ ಎಷ್ಟು ಕೆರೆಗಳು ಮಂಜೂರಾಗಿವೆ ಹಾಗೂ ಎಷ್ಟು ಕೆರೆಗಳ ಅಭಿವೃದ್ಧಿ ಕಾರ್ಯ ಪೂರ್ಣಗೊಂಡಿವೆ, ಒಟ್ಟು ಮಂಜೂರಾದ ಮತ್ತು ಖರ್ಚಾದ ಹಣವೆಷ್ಟು;

ಆ) ಎರಡನೇ ಹಂತದ ಕಾಮಗಾರಿ ಪ್ರಾರಂಭ ಮಾಡಲು ಈ ಯೋಜನೆಗೆ ವಿಶ್ವಬ್ಯಾಂಕ್‌ನಿಂದ ಎಷ್ಟು ಹಣ ಬಿಡುಗಡೆಯಾಗಿದೆಯೇ; ಹಾಗಿದ್ದಲ್ಲಿ

ಎಷ್ಟು ಕೆರೆಗಳು ಮಂಜೂರಾಗಿವೆ? (ಜಿಲ್ಲಾವಾರು ಪೂರ್ಣ ಪ್ರಗತಿ ವಿವರ ನೀಡುವುದು)

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಉತ್ತರ

ಅ) ಜಲ ಸಂವರ್ಧನೆ ಯೋಜನಾ ಸಂಘವು 2002ರಲ್ಲಿ ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣಾ ಯೋಜನೆಯ ಅಡಿಯಲ್ಲಿ 2005 ಕೆರೆಗಳನ್ನು ಪುನಃಶ್ಚೇತನಗೊಳಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಯೋಜನೆಯ ಅಂದಾಜು ಮೊತ್ತ 508.63 ಕೋಟಿ ರೂ.ಗಳಾಗಿದ್ದು, ಈ ಪೈಕಿ ವಿಶ್ವಬ್ಯಾಂಕ್‌ನ ನೆರವು 401.82 ಕೋಟಿ ರೂ.ಗಳಾಗಿರುತ್ತದೆ. 2005 ಕೆರೆಗಳ ಪೈಕಿ 1829 ಕೆರೆಗಳನ್ನು ಆಯ್ಕೆ ಮಾಡಲಾಗಿದ್ದು, ಈ ಕೆರೆಗಳ ಕಾಮಗಾರಿಗಳನ್ನು 317.24 ಕೋಟಿ ರೂ.ಗಳಲ್ಲಿ ಪೂರ್ಣಗೊಳಿಸಲಾಗಿದೆ. 1829 ಕೆರೆಗಳ ಪೈಕಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 951 ಕೆರೆಗಳು ಹಾಗೂ ಉಳಿದ 9 ಜಿಲ್ಲೆಗಳಲ್ಲಿ 878 ಕೆರೆಗಳನ್ನು ಪುನಃಶ್ಚೇತನಗೊಳಿಸಲು ಆಯ್ಕೆ ಮಾಡಲಾಗಿದೆ. ಮೊದಲನೇ ಹಂತದ ಯೋಜನೆಯಡಿ 177.94 ಕೋಟಿ ರೂಗಳ ಉಳಿತಾಯ ಮಾಡಲಾಗಿದ್ದು, ಈ ಮೊತ್ತದಲ್ಲಿ ಮೊದಲ ಹಂತದ 9 ಜಿಲ್ಲೆಗಳಲ್ಲಿ 834 ಹೆಚ್ಚುವರಿ ಕೆರೆಗಳನ್ನು ಪುನಃಶ್ಚೇತನಗೊಳಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಕೆರೆಗಳನ್ನು ಎರಡನೇ ಹಂತದ ಯೋಜನೆಯೊಂದಿಗೆ ಪುನಃಶ್ಚೇತನಗೊಳಿಸಲಾಗುತ್ತಿದ್ದು. ಅಕ್ಟೋಬರ್–2012 ರವರೆಗೆ 176.05 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಒಟ್ಟಾರೆ ಮೊದಲನೇ ಹಂತದ ಹಾಗೂ ಮುಂದುವರೆದ ಹಂತದ ಯೋಜನೆಯ ಒಟ್ಟಾರೆ ಯೋಜನಾ ವೆಚ್ಚದ 508.63 ಕೋಟಿ ರೂ.ಗಳ ಪೈಕಿ 493.29 ಕೋಟಿ ರೂ.ಗಳ ವೆಚ್ಚ ಭರಿಸಲಾಗಿದೆ. 834 ಕೆರೆಗಳ ಪೈಕಿ ಕೋಲಾರ ಜಿಲ್ಲೆಯಲ್ಲಿ 177 ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 137 ಹೀಗೆ ಒಟ್ಟು 314 ಕೆರೆಗಳನ್ನು ಪುನಃಶ್ಚೇತನಗೊಳಿಸಲಾಗುತ್ತಿದೆ. ಹೀಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಟ್ಟು 1265 ಕೆರೆಗಳ ಪುನಃಶ್ಚೇತನ ಹಮ್ಮಿಕೊಳ್ಳಲಾಗಿದೆ.

ಆ) ಎರಡನೇ ಹಂತದ ಯೋಜನೆ 2008–09 ರಲ್ಲಿ ಆರಂಭಗೊಂಡಿದ್ದು, ಯೋಜನೆಯ ಅಂದಾಜು ಮೊತ್ತ ರೂ.306.98 ಕೋಟಿಗಳಾಗಿವೆ. ಇದರಲ್ಲಿ ವಿಶ್ವಬ್ಯಾಂಕ್‌ನ ನೆರವು 276.28 ಕೋಟಿ

ರೂ.ಗಳಾಗಿದ್ದು, ಇಲ್ಲಿಯವರೆಗೆ 247.20 ಕೋಟಿ ರೂ.ಗಳ ವೆಚ್ಚದಲ್ಲಿ 1047 ಕೆರೆಗಳನ್ನು ಪುನಃಶ್ಚೇತನಗೊಳಿಸಲಾಗುತ್ತಿದೆ. ಯೋಜನೆಯ ವೆಚ್ಚ 306.98 ಕೋಟಿ ರೂ.ಗಳ ಪೈಕಿ ಅಕ್ಟೋಬರ್ 2012 ರವರೆಗೆ ರೂ.247.20 ಕೋಟಿ ರೂ.ಗಳ ವೆಚ್ಚ ಭರಿಸಲಾಗಿದೆ. ಜಿಲ್ಲಾವಾರು ಕೆರೆಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಶ್ರೀ ಮುನಿಯಪ್ಪ ವಿ., ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:292ಕ್ಕೆ ಅನುಬಂಧ–I					
ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣಾ ಯೋಜನೆ					
ಜಿಲ್ಲಾವಾರು ಮಂಜೂರಾದ ಕೆರೆಗಳ ವಿವರಗಳು					
PHASE-I					
ಮೊದಲನೆ ಹಂತದ ಯೋಜನೆ					
ಕ್ರ ಸಂ.	ಜಿಲ್ಲೆ	ಕೆರೆಗಳ ಸಂಖ್ಯೆ	ಕೆರೆಗಳ ಸಿವಿಲ್ ಕಾಮಗಾರಿಗಳ ಅಭಿವೃದ್ಧಿಗಾಗಿ ಯೋಜಿಸಿದ ಮೊತ್ತ (ರೂ.ಲಕ್ಷಗಳಲ್ಲಿ)	ಖರ್ಚಾದ ಮೊತ್ತ (ರೂ.ಲಕ್ಷಗಳಲ್ಲಿ) ಅಕ್ಟೋಬರ 2012 ರವರೆಗೆ	ಅನುಷ್ಠಾನ ಪೂರ್ಣಗೊಂಡಿರುವ ಕೆರೆಗಳ ಸಂಖ್ಯೆ
1	ಬಾಗಲಕೋಟೆ	34	6.20	5.39	27
2	ಬೀದರ	29	3.93	3.34	25
3	ಚಿಂತಾಮಣಿ	430	35.14	33.26	414
4	ಚಿತ್ರದುರ್ಗ	58	8.52	7.05	51
5	ಹಾವೇರಿ	192	19.86	17.60	186
6	ಹೋಸಪೇಟೆ	85	9.06	8.36	79
7	ಕೋಲಾರ	521	39.39	34.50	502
8	ರಾಯಚೂರ	123	8.44	7.82	118
9	ತುಮಕೂರು	357	38.57	36.04	340
ಒಟ್ಟು		**1829**	**169.11**	**153.35**	**1742**
PHASE-II					
ಮೊದಲನೇ ಹಂತದ ಮುಂದುವರೆದ ಯೋಜನೆ					
1	ಬಾಗಲಕೋಟೆ	17	3.92	1.85	6
2	ಬೀದರ್	36	10.83	9.50	22
3	ಚಿಂತಾಮಣಿ	137	33.50	27.65	71
4	ಚಿತ್ರದುರ್ಗ	96	26.22	22.66	60
5	ಹಾವೇರಿ	200	45.96	34.46	25
6	ಹೋಸಪೇಟೆ	33	9.45	8.50	13
7	ಕೋಲಾರ	177	28.25	15.87	37
8	ರಾಯಚೂರ	19	5.71	3.41	16
9	ತುಮಕೂರು	119	22.96	15.80	85
ಒಟ್ಟು		**834**	**186.80**	**139.70**	**335**
ಹೆಚ್ಚುವರಿ ಹಣಕಾಸಿನ ಯೋಜನೆ					
1	ಬೆಳಗಾವಿ	134	30.63	17.44	47
2	ಬಿಜಾಪುರ	48	15.37	12.53	33
3	ಚಿಕ್ಕಮಗಳೂರು	111	17.33	14.83	68
4	ದಾವಣಗೆರೆ	86	24.71	21.95	68
5	ಧಾರವಾಡ	104	22.13	7.51	14
6	ಹಾಸನ	51	13.24	12.46	51
7	ಶಿವಮೊಗ್ಗ	164	25.58	48.73	84
8	ಶಿಕಾರಿಪುರ	260	57.28	19.45	105
9	ಶಿರಸಿ	89	14.17	11.30	33
ಒಟ್ಟು		**1047**	**220.44**	**166.20**	**503**
ಮಹಾಮೊತ್ತ		**3710**	**576.35**	**459.24**	**2580**